ಪ್ರಜಾವಾಣಿ

# ಮಹಿಳಾ ಸಬಲೀಕರಣವೆಂದರೆ ಆರ್ಥಿಕ ಸ್ವಾತಂತ್ರ್ಯವಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿ ಕಚೇರಿಯಲ್ಲಿಯೂ 'ತೇಜ್‌ಪಾಲ್'ನಂತಹವರು ಇರುತ್ತಾರೆ. ಇಂತಹವರ ವಿರುದ್ಧ ಯಾವ ರೀತಿಯ ಹೋರಾಟ ಮಾಡುತ್ತೀರಿ?' ಹೀಗೆಂದು ಪ್ರಶ್ನಿಸಿದವರು ನಿವೃತ್ತ ಐಪಿಎಸ್ ಅಧಿಕಾರಿಯಾಗಿದ್ದ ಸಾಮಾಜಿಕ ಕಾರ್ಯಕರ್ತೆ ಕಿರಣ್ ಬೇಡಿ.

ಜೈನ್ ವಿಶ್ವವಿದ್ಯಾಲಯವು ನಗರದ ಸಿಎಂಎಸ್ ವಾಣಿಜ್ಯ ಶಾಲೆಯಲ್ಲಿ ಆಯೋಜಿಸಿದ್ದ 'ಮಹಿಳಾ ಸಬಲೀಕರಣ' ಕುರಿತ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಲೈಂಗಿಕ ದೌರ್ಜನ್ಯಕ್ಕೆ ಜಾಮೀನು ರಹಿತ 10 ವರ್ಷಗಳ ಕಾಲ ಸಜೆಯೆಂಬುದು ಗೊತ್ತಿದ್ದರೆ, 'ತೇಜ್‌ಪಾಲ್'ನಂತಹವರು ಲೈಂಗಿಕ ಹಲ್ಲೆಗೆ ಮುಂದಾಗುವ ಮುನ್ನ ಹತ್ತು ಬಾರಿ ಯೋಚಿಸುತ್ತಾರೆ. ಕಾನೂನಿನ ಭಯವಿಲ್ಲದೇ ಹೋದಾಗ ಮಾತ್ರ ಇಂತಹ ತಪ್ಪುಗಳು ಜರುಗುತ್ತವೆ' ಎಂದರು.

'ಲೈಂಗಿಕ ಹಲ್ಲೆ ನಡೆದಾಗ ಮಹಿಳೆಯರು ಅಂಜುಬುರುಕಿಯಾಗಬಾರದು. ಕಾಲೇಜು, ಕಚೇರಿಗಳಲ್ಲಿ ನೈತಿಕ ಸ್ಥೈರ್ಯ ಒದಗಿಸಲು ಮಹಿಳೆಯರದ್ದೇ ಒಂದು ಜಾಲ ರೂಪುಗೊಳ್ಳಬೇಕು. ಆಗ ಮಾತ್ರ ಮಹಿಳೆಯರು ಇಂತಹ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸಲು ಸಾಧ್ಯವಿದೆ' ಎಂದು ಅಭಿಪ್ರಾಯಪಟ್ಟರು.

**ತಂದೆಯೇ ಪ್ರೇರಣೆ:** 'ನನಗೆ ಚಿಕ್ಕಂದಿನಿಂದಲೂ ಏನಾಗಬೇಕು ಎಂಬುದರ ಬಗ್ಗೆ ಸ್ಪಷ್ಟತೆಯಿತ್ತು. ಸರ್ಕಾರದ ಅಧಿಕಾರದಲ್ಲಿದ್ದುಕೊಂಡೇ ಒಳಿತು ಮಾಡಬೇಕೆಂಬ ಅದಮ್ಯ ಆಸೆಯಿತ್ತು. ಅದಕ್ಕೆಲ್ಲ ನನ್ನ ತಂದೆಯೇ ಪ್ರೇರಣೆ' ಎಂದು ಉತ್ತರಿಸಿದರು.

'ಮಹಿಳಾ ಸಬಲೀಕರಣವೆಂದರೆ ಕೇವಲ ಆರ್ಥಿಕ ಸ್ವಾತಂತ್ರ್ಯ ಅಲ್ಲ. ಅತ್ಯುನ್ನತ ಶೈಕ್ಷಣಿಕ ಪ್ರಗತಿ ಸಾಧಿಸಿ, ವರದಕ್ಷಿಣೆ ನೀಡಿ ಮದುವೆಯಾದರೆ ಸಬಲೀಕರಣವಾಗುವುದಿಲ್ಲ. ಮಹಿಳೆಯರಿಗೆ ಉತ್ತಮ ಗೃಹಿಣಿ, ತಾಯಿಯಾಗುವ ಜವಾಬ್ದಾರಿಗಳ ನಡುವೆ ವೃತ್ತಿಪರಳಾಗುವ ಬಗ್ಗೆ ಸ್ಪಷ್ಟ ಗುರಿಯಿರಬೇಕು. ಇದಕ್ಕೆಲ್ಲ ಸ್ವತಂತ್ರ ಪ್ರವೃತ್ತಿಯೇ ಮೂಲಾಧಾರವಾಗಬೇಕು' ಎಂದು ಅಭಿಪ್ರಾಯಪಟ್ಟರು.

'ದೇಶದಲ್ಲಿ ಶೇ 7ರಷ್ಟು ಮಹಿಳೆಯರು ಮಾತ್ರ ಪಿತ್ರಾರ್ಜಿತ ಆಸ್ತಿ ಗಳಿಸುವಲ್ಲಿ ಸಫಲರಾಗುತ್ತಾರೆ. ಉಳಿದವರ ಕತೆಯೇನು?' ಎಂದು ಪ್ರಶ್ನಿಸಿದ ಅವರು, 'ಸತತವಾಗಿ ಜ್ಞಾನಗಳಿಸಿ, ಗೃಹಿಣಿಯಾಗಿದ್ದರೂ, ಪ್ರಚಲಿತ ವಿದ್ಯಮಾನಗಳನ್ನು ಆಳವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿ' ಎಂದು ತಿಳಿಸಿದರು.

ಜೈನ್ ಯೂನಿವರ್ಸಿಟಿ ಟ್ರಸ್ಟ್ ಅಧ್ಯಕ್ಷ ಡಾ.ಚೆನ್ರಾಜ್ ರಾಯ್‌ಚಂದ್ ಉಪಸ್ಥಿತರಿದ್ದರು.



ಜೈನ್ ವಿಶ್ವವಿದ್ಯಾಲಯವು ನಗರದ ಸಿಎಂಎಸ್ ವಾಣಿಜ್ಯ ಶಾಲೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ವಿದ್ಯಾರ್ಥಿನಿಯರನ್ನುದ್ದೇಶಿಸಿ ಮಾತನಾಡಿದರು

## 'ಆಪ್'ಗೂ ನನಗೂ ಸಂಬಂಧವಿಲ್ಲ

'ಆಮ್ ಆದ್ಮಿ ಪಕ್ಷಕ್ಕೂ (ಆಪ್) ನನಗೂ ಯಾವುದೇ ರೀತಿಯಲ್ಲೂ ಸಂಬಂಧವಿಲ್ಲ' ಎಂದು ಕಿರಣ್ ಬೇಡಿ ಸ್ಪಷ್ಟಪಡಿಸಿದರು. 'ಭ್ರಷ್ಟಾಚಾರ ವಿರೋಧಿ ಆಂದೋಲನಕ್ಕೆ ಚಾಲನೆ ನೀಡಿದ ಸಂದರ್ಭದಲ್ಲಿ ಅಣ್ಣಾ ಹಜಾರೆಯೊಂದಿಗೆ ಜತೆಗೂಡಿದ್ದೆ. ಆದರೆ, ಅದೇ ಚಳವಳಿ ರಾಜಕೀಯವಾಗಿ ತಿರುವು ಪಡೆದುಕೊಂಡಿತು. ನಾನು ಚಳವಳಿಯಲ್ಲಿಯಷ್ಟೇ ಭಾಗವಹಿಸಿದ್ದೆ. ರಾಜಕೀಯ ಪಕ್ಷವಾಗಿ ಪರಿವರ್ತನೆಗೊಂಡ ಅರವಿಂದ ಕೇಜ್ರಿವಾಲ್ ಅವರ ನಿಲುವಿಗೆ ಸಮ್ಮತವಿಲ್ಲ' ಎಂದು ಪ್ರತಿಕ್ರಿಯಿಸಿದರು.